ಆ) ಸೂಪಾ ೬
ಹಳಿಯಾಳ ೨೨
ಯಲ್ಲಾಪುರ ೧೫

ಇ)

	ಸೂಪಾ	ಹಳಿಯಾಳ	ಯಲ್ಲಾಪುರ
ಹಿಂದುಳಿದವರು	೨೩	೩೩	೯
ಅಲ್ಪಸಂಖ್ಯಾತರು	೨	೩	೧
ಹರಿಜನರು	೧೪	೮	೪

ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡ ಪಶು ಚಿಕಿತ್ಸಾಲಯ ಕಟ್ಟಡದ ದುರಸ್ತಿ

೮೬೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಪಶುವೈದ್ಯ ಹಾಗೂ ಪಶು ಸಂಗೋಪನಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡದಲ್ಲಿರುವ ಪಶು ಚಿಕಿತ್ಸಾಲಯದ ಕಟ್ಟಡವು ಕೀಳು ಹಾಗೂ ತುಂಬಾ ಅಪಾಯ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಸದರಿ ಕಟ್ಟಡವನ್ನು ದುರಸ್ತಿಗೊಳಿಸಲು ತೆಗೆದುಕೊಂಡ ಕ್ರಮಗಳೇನು?

ಇ) ಸದರಿ ಕಟ್ಟಡವು ಸರ್ಕಾರದವರ ವಶದಲ್ಲಿ ಇರದಿದ್ದಲ್ಲಿ 'ಕೊಡುಗೆ'ಯಾಗಿ ಕೊಡಲು ಒಪ್ಪಿದ್ದಲ್ಲಿ ಸರ್ಕಾರವು ಸ್ವೀಕರಿಸುವುದೇ?

ಈ) ಈ ದಿಸೆಯಲ್ಲಿ ಸಂಬಂಧಪಟ್ಟವರಿಂದ ಏನಾದರೂ ಸೂಚನೆಗಳು ಬಂದಿವೆಯೇ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಸದರಿ ಕಟ್ಟಡದ ದುರಸ್ತಿಗಾಗಿ ಗಜೇಂದ್ರಗಡದ ಪುರಸಭೆಯವರನ್ನು ಕೋರಲಾಗಿದೆ.

ಇ) ಹಾಲಿ ಕಟ್ಟಡ ದುಸ್ಥಿತಿಯಲ್ಲಿರುವ ಪ್ರಯುಕ್ತ ಸಾಧ್ಯವಾಗುವುದಿಲ್ಲ.

ಈ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಚಾಯತ್ ನೌಕರರ ಬೇಡಿಕೆಗಳು

೮೬೯. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ;—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೪೦೦ ಪಂಚಾಯತ್ ನೌಕರರು ಮೈಸೂರು ವಿಭಾಗಾಧಿಕಾರಿಗಳ ಆದೇಶ ಸಂಖ್ಯೆ. ವಿಪಿಸಿ. ೧೮೫ ಟಿ.೧/೮೫-೮೬ ದಿನಾಂಕ ೨೩-೫-೮೫ರಂತೆ ಕೆಲಸದಿಂದ ವಿಮುಕ್ತಿ ಹೊಂದುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಆದೇಶಕ್ಕೆ ತಡೆಯಾಜ್ಞೆ ಕೊಟ್ಟು ಮೇಲ್ಕಂಡ ನೌಕರರ ತೊಂದರೆ ನಿವಾರಿಸಲಾಗುವುದೇ, ಹಾಗೂ ಈ ನೌಕರರನ್ನು ಸರ್ಕಾರದ ನೌಕರರನ್ನಾಗಿ ಪರಿವರ್ತಿಸಲಾಗುವುದೇ?